
ನಿಮ್ಮೊಡನೆ

# ಹೊಸ ವರುಷ.... ಹೊಸ ಕನಸು

**ಉರುಳಿ ಹೋದ 2009ನೇ ವರ್ಷ, ಸಂಸದೀಯ ಇತಿಹಾಸದಲ್ಲೇ ಮೊದಲ ಬಾರಿಗೆ ಮಹಿಳಾ ಶಕ್ತಿಯ ಹೊಸ ಅಧ್ಯಾಯ ಬರೆದು ಒಂದಿಷ್ಟು ಹೊಸ ಕನಸುಗಳಿಗೆ ಜೀವ ನೀಡಿತು. ಈಗ 2010ರ ಹೊಸ ವರ್ಷ ಮಹಿಳಾ ಮೀಸಲು ಮಸೂದೆಗೆ ಮರು ಜೀವ ನೀಡಿ ಮಹಿಳಾ ರಾಜಕೀಯ ನಾಯಕತ್ವಕ್ಕೆ ಹೊಸದೊಂದು ಸ್ವರೂಪ ನೀಡುತ್ತದೆಯೆ?**



**2010**......ಬಂದಿದೆ ಮತ್ತೊಂದು ಹೊಸ ವರ್ಷ. ಹೊಸ ಕನಸು, ಹೊಸ ಗುರಿಗಳ ಸಾಧನೆಯತ್ತ ಹೊಸ ಹೆಜ್ಜೆಗಳನಿರಿಸುವ ಕಾಲ. ಉರುಳಿ ಹೋದ 2009ನೇ ವರ್ಷ, ಸಂಸದೀಯ ಇತಿಹಾಸದಲ್ಲಿ ಮಹಿಳಾ ಶಕ್ತಿಯ ಹೊಸ ಅಧ್ಯಾಯ ಬರೆದು ಒಂದಿಷ್ಟು ಹೊಸ ಕನಸುಗಳಿಗೆ ಜೀವ ನೀಡಿದೆ. ಕಳೆದ ವರ್ಷ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಮೊದಲ ಬಾರಿಗೆ 59 ಮಹಿಳಾ ಎಂಪಿಗಳು ಲೋಕಸಭೆ ಪ್ರವೇಶಿಸಿದರು. ಹಾಗೆಂದಾಕ್ಷಣ ನ್ಯಾಯಯುತವಾದ ಮಹಿಳಾ ಪ್ರಾತಿನಿಧ್ಯ ದಕ್ಕಿಹೋಯಿತು ಎಂದಲ್ಲ. 1977ರಲ್ಲಿ ಕೇವಲ ಶೇ.3.5ರಷ್ಟಿದ್ದ ಪ್ರಾತಿನಿಧ್ಯ ಮೂರು ದಶಕಗಳ ಅವಧಿಯಲ್ಲಿ ಕ್ರಮೇಣ ಇದೇ ಮೊದಲ ಬಾರಿಗೆ ಶೇ.10ಕ್ಕೇರಿದೆ ಅಷ್ಟೆ. ಆದರೆ ಪ್ರಮುಖ ರಾಜಕೀಯ ಸ್ಥಾನಗಳಲ್ಲಿ ಮಹಿಳೆಯರು ಗೋಚರವಾಗುತ್ತಿರುವುದು ಸಕಾರಾತ್ಮಕ ಬೆಳವಣಿಗೆ. ಸೋನಿಯಾ ಗಾಂಧಿ ಕಾಂಗ್ರೆಸ್ ಅಧ್ಯಕ್ಷೆ; ಜೊತೆಗೆ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಯುಪಿಎ ಮೈತ್ರಿಕೂಟದ ಅಧ್ಯಕ್ಷೆ. ಇದೇ ಸಂದರ್ಭದಲ್ಲಿ ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕಿಯಾಗಿ ಸುಷ್ಮಾ ಸ್ವರಾಜ್ ಆಯ್ಕೆಯಾಗಿದ್ದಾರೆ. ಜೊತೆಗೆ ಮೀರಾ ಕುಮಾರ್ ಲೋಕಸಭಾ ಸ್ಪೀಕರ್.

ಎರಡೂವರೆ ವರ್ಷಗಳಿಂದ ಭಾರತದ ರಾಷ್ಟ್ರಪತಿಯಾಗಿರುವ ಪ್ರತಿಭಾ ಪಾಟೀಲ್ ರಾಷ್ಟ್ರದ ಸಶಸ್ತ್ರ ಪಡೆಗಳ ಸುಪ್ರೀಂ ಕಮ್ಯಾಂಡರ್ ಕೂಡ ಹೌದು. ಕಳೆದ ವಾರ ನೌಕಾಪಡೆಯ ಯುದ್ಧನೌಕೆ ಐಎನ್ಎಸ್ ವಿರಾಟ್‌ನಲ್ಲಿ ಮೂರು ಗಂಟೆ ಕಳೆದರು. ಇದಕ್ಕೂ ಮುಂಚೆ ನವೆಂಬರ್‌ನಲ್ಲಿ ಭಾರತ ವಾಯುಪಡೆಯ ಸುಖೋಯ್ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಿ ಅವರು ನುಡಿದಿದ್ದ ಮಾತುಗಳು ಇವು: 'ನಮ್ಮ ಮಹಿಳೆಯರು ಯುದ್ಧ ವಿಮಾನಗಳಲ್ಲಿ ಹಾರಾಟ ನಡೆಸಲು ಸಮರ್ಥರು'. ವಿಪರ್ಯಾಸವೆಂದರೆ, ಯುದ್ಧ ವಿಮಾನದ ಪೈಲಟ್‌ಗಳಾಗಬಯಸುವ ಮಹಿಳೆಯರು ಕೆಲವು ವರ್ಷಗಳ ಕಾಲ ತಾಯ್ತನ ಮುಂದೂಡುವಂತಹ ಪೂರ್ವಷರತ್ತಿಗೆ ಬದ್ಧರಾಗಿರಬೇಕೆಂಬ ಹೇಳಿಕೆಯನ್ನು ಭಾರತೀಯ ವಾಯುಪಡೆಯ ಉಪ ಮುಖ್ಯಸ್ಥ ಏರ್ ಮಾರ್ಷಲ್ ಪಿ.ಕೆ.ಬರ್ಬೊರಾ ನೀಡಿದ್ದರು. ಇದು ವಿವಾದವಾದಾಗ ಕ್ಷಮಾಪಣೆ ಕೋರಿ ಅದು ತಮ್ಮ ವೈಯಕ್ತಿಕ ಅಭಿಪ್ರಾಯವೇ ಹೊರತು ರಕ್ಷಣಾ ಇಲಾಖೆಯದಲ್ಲ ಎಂದು ಸ್ಪಷ್ಟಪಡಿಸಿದಂತಹ ವಿದ್ಯಮಾನ ನಡೆಯಿತು.

ಮಹಿಳೆ ಕುರಿತಂತೆ ಈ ಬಗೆಯ ದ್ವಿಮುಖ ಧೋರಣೆಗಳೇ ರಾಜ್ಯದ ಸಂಪುಟದಲ್ಲಿದ್ದ ಏಕೈಕ ಸಚಿವೆ ಶೋಭಾ ಕರಂದ್ಲಾಜೆ ಅವರ ಸಚಿವಸ್ಥಾನಕ್ಕೆ ಮುಳುವಾಯಿತು. ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದರೆಂಬ ಕಾರಣಕ್ಕೆ ಕರ್ನಾಟಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಮಂಡಳಿಯ ಅಧ್ಯಕ್ಷ ಸ್ಥಾನದಿಂದ ಚಿತ್ರನಟಿ ಶ್ರುತಿ ರಾಜೀನಾಮೆ ಪಡೆದ ಪ್ರಕರಣ, ಬಾರ್ ಗರ್ಲ್ಸ್ ಅಪಹರಣ ಪ್ರಕರಣ ಸುಖಾಂತ್ಯವಾದ ಸಂದರ್ಭದಲ್ಲೇ ಬಾರ್‌ಗಳಲ್ಲಿ ಮಹಿಳೆಯರಿಗೆ ಕೆಲಸ ಮಾಡಲು ಅವಕಾಶ ನೀಡುವ ಸುಪ್ರೀಂಕೋರ್ಟ್ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ರಾಜ್ಯಸರ್ಕಾರಕ್ಕೆ ಸಲಹೆ ನೀಡುವ ವಿಚಾರ ಪ್ರಸ್ತಾಪಿಸಿದ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಶಂಕರ್ ಬಿದರಿ ಮಾತುಗಳೆಲ್ಲವೂ ಅಸ್ತಿತ್ವದಲ್ಲಿರುವ ಪೂರ್ವಗ್ರಹಗಳತ್ತಲೇ ಬೆಟ್ಟು ಮಾಡುತ್ತವೆ. ಮಂಗಳೂರಿನ ಪಬ್‌ನಲ್ಲಿ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯದ ಘಟನೆಯ ನಂತರದ ಘಟನಾವಳಿ ಹಿನ್ನೆಲೆಯಲ್ಲಿ ನಡೆದ 'ಪಿಂಕ್ ಚೆಡ್ಡಿ' ಆಂದೋಲನ, ಮೋಸ ಮಾಡಿದ ಪ್ರಿಯಕರನ ವಿರುದ್ಧ ಆತನ ಮದುವೆ ದಿನ ಕಲ್ಯಾಣಮಂಟಪಕ್ಕೇ ಹೋಗಿ ಪ್ರಿಯಾಂಕಾ ತೋರಿದ ಪ್ರತಿಭಟನೆ– ಪ್ರತಿರೋಧದ ಹೊಸ ದನಿಗಳಾದವು.

ಈ ಎಲ್ಲಾ ವಿಷಾದದ ಛಾಯೆಯೊಳಗೇ ಭಾರತದ ಕಾರ್ಪೊರೆಟ್ ಜಗತ್ತಿನಲ್ಲಿ ಹೊಸ ಭರವಸೆಯ ಕಿರಣಗಳು ಮೂಡಿವೆ. ಸುಮಾರು ಶೇ.11ರಷ್ಟು ಭಾರತೀಯ ಕಂಪೆನಿಗಳು ಮಹಿಳಾ ಸಿಇಓಗಳನ್ನು ಹೊಂದಿವೆ ಎಂಬುದು ಇತ್ತೀಚಿನ ವರದಿ. ಅಮೆರಿಕದಲ್ಲಿರುವುದಕ್ಕಿಂತ ಇದು ನಾಲ್ಕು ಪಟ್ಟು ಹೆಚ್ಚು. ರಾಜಕೀಯರಂಗದಲ್ಲೂ ಮಹಿಳಾ ನಾಯಕತ್ವ ಹೊಸದೊಂದು ಸ್ವರೂಪ ಪಡೆದುಕೊಳ್ಳಲಿದೆಯೆ? ಎಂಬುದೀಗ ಪ್ರಶ್ನೆ. ಸಂಸತ್ತು ಹಾಗೂ ಶಾಸನಸಭೆಗಳಲ್ಲಿ ಶೇ.33ರಷ್ಟು ಮೀಸಲು ಒದಗಿಸುವ ಮಹಿಳಾ ಮೀಸಲು ಮಸೂದೆಯನ್ನು ಈಗಿರುವ ರೂಪದಲ್ಲೇ ಸಾಧ್ಯವಾದಷ್ಟು ಬೇಗ ಅಂಗೀಕರಿಸಬೇಕು ಎಂದು ಕಾನೂನು ಹಾಗೂ ನ್ಯಾಯ ಕುರಿತ ಸಂಸದೀಯ ಸಮಿತಿ ಇತ್ತೀಚೆಗೆ ಶಿಫಾರಸು ಮಾಡಿದೆ. ಹೊಸ ವರ್ಷದಲ್ಲಿ ಫೆಬ್ರುವರಿಯಲ್ಲೇ ಸಂಸತ್ತಿನ ಬಜೆಟ್‌ಅಧಿವೇಶನದಲ್ಲಿ ಈ ಮಸೂದೆ ಅಂಗೀಕಾರವಾಗಬಹುದೆಂಬ ಆಶಯವನ್ನು ಈ ಸಮಿತಿಯ ಅಧ್ಯಕ್ಷೆ ಜಯಂತಿ ನಟರಾಜನ್ ವ್ಯಕ್ತಪಡಿಸಿದ್ದಾರೆ. ಈ ಆಶಯಕ್ಕೆ ನಾವೂ ದನಿಗೂಡಿಸೋಣ. ಹೊಸ ವರ್ಷದಲ್ಲಿ ಹೊಸ ಬೆಳಕಿಗಾಗಿ ಹಂಬಲಿಸೋಣ.

■ ಸಿ. ಜಿ. ಮಂಜುಳಾ